ಎಸ್.ಸಿ.ಸಂಖ್ಯೆಃ 10047/2025
ಪ್ರಾ.ಸಾ.ಸಂಖ್ಯೆಃ 06
ಚಾ.ಸಾ.ಸಂಖ್ಯೆಃ 02

## ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ

**ಎಸ್.ಸಿ.ಸಂಖ್ಯೆಃ 10047/2025**

| | |
|---|---|
| ಹೆಸರುಃ | ಕೇಶವ ನಡುವಿನಮನಿ |
| ತಂದೆಯ ಹೆಸರುಃ | ರಮೇಶ |
| ವಯಸ್ಸುಃ | 35 ವರ್ಷ |
| ಉದ್ಯೋಗಃ | ಖಾಸಗಿ ಚಾಲಕ |
| ವಾಸಃ | ಮುಧೋಳ |

**ಸಾಕ್ಷಿಯನ್ನು ದಿಃ 11.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ–**

1. ನನಗೆ ಚಾಸಾ–1 ಹಾಗೂ 3 ಇವರ ಪರಿಚಯ ಇದೆ. ಈಗ ನೋಡುತ್ತಿರುವ ನಿಪಿ–4 ರ ಮೇಲೆ ನನ್ನ ಸಹಿ ಇದೆ. (ಸದರಿ ಸಹಿಯನ್ನು ನಿಪಿ–4(ಬಿ) ಅಂತಾ ಗುರುತಿಸಲಾಯಿತು.)

2. ದಿನಾಂಕಃ 28.02.2021 ರಂದು ಬೆಳಗಿನ 10.30 ರಿಂದ 11.00 ಗಂಟೆ ಅವಧಿಯಲ್ಲಿ ಪೋಲೀಸರು ನನ್ನನ್ನು ಚಾಸಾ–4 ಇವರ ಮನೆಯ ಹತ್ತಿರ ಪಂಚನಾಮೆ ಮಾಡಲು ಕರೆಸಿದರು. ಅಲ್ಲಿ ಚಾಸಾ–4, ನಾನು ಹಾಗೂ ಚಾಸಾ–3 ಇದ್ದೇವು. ಜಾಗೆಯನ್ನು ನಾನು ತೋರಿಸಿದೆ. ಅಲ್ಲಿ ಪೋಲೀಸರು

ನಿಪಿ-4 ರಂತೆ ಪಂಚನಾಮೆಯನ್ನು ಮಾಡಿದರು. ಅಲ್ಲಿ ಚಾಸಾ-4 ಈಗ ನೋಡುತ್ತಿರುವ ಮು.ಮಾ. 1ನ್ನು ಹಾಜರುಡಿಸಿದರು. ಅದನ್ನು ಪೋಲೀಸರು ತೆಗೆದುಕೊಂಡರು. ಆಗ ನಿಪಿ-5 ಮತ್ತು 6 ರಂತೆ ಪೋಟೋಗಳನ್ನು ತೆಗೆದರು.

**<u>ಪಾಟೀ ಸವಾಲುಃ 2 ರಿಂದ 4ನೇ ಆರೋಪಿತರ ಪರವಾಗಿ ಶ್ರೀ. ಎಸ್.ಸಿ.ಎಚ್. ವಕೀಲರಿಂದಃ</u>**

1. ಪಂಚನಾಮೆಗೆ ಬರಲು ನನಗೆ ನೋಟೀಸು ನೀಡಿರಲಿಲ್ಲ. ನಾನು ಹಾಗೂ ಚಾಸಾ-1 ಗೆಳೆಯರು ಎಂದರೆ ಸರಿಯಲ್ಲ. ಒಂದೇ ಓಣಿಯವರು ಇರುತ್ತೇವೆ. ನಾನು ಭೀಮ್ ಆರ್ಮಿಯ ಸದಸ್ಯನು ಇದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆ ಬರೆಯಲು ಮಾಹಿತಿ ನೀಡಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಮು.ಮಾ. 1 ಚಾಸಾ-4 ಇವರ ಮನೆಯ ಮುಂದೆ ಬಿದ್ದಿತ್ತು. ಮು.ಮಾ. 1 ರಂತಹ ಬಡಿಗೆಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ.

2. ಪೋಲೀಸರು ನನ್ನನ್ನು ಚಾಸಾ-4 ಇವರ ಮನೆಯ ಹತ್ತಿರ ಕರೆಸಿಲ್ಲ, ನಿಪಿ-4 ರಂತೆ ಪಂಚನಾಮೆ ಮಾಡಿಲ್ಲ, ಮು.ಮಾ. 1ನ್ನು ಜಪ್ತು ಮಾಡಿಲ್ಲ ಎಂಂದರೆ ಸರಿಯಲ್ಲ. ನಾನು ಹಾಗೂ ಚಾಸಾ-1 ಸ್ನೇಹಿತರು ಇರುವುದರಿಂದ ಅವನ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಎಸ್.ಸಿ.ಸಂಖ್ಯೆಃ** **10047/2025**
**ಪ್ರಾ.ಸಾ.ಸಂಖ್ಯೆಃ** **06**
**ಚಾ.ಸಾ.ಸಂಖ್ಯೆಃ** **02**

**ಪಾಟೀ ಸವಾಲುಃ** 1 ನೇ ಆರೋಪಿತರ ಪರವಾಗಿ ಶ್ರೀ. ಎಸ್.ಐ.ಎಚ್. ವಕೀಲರು ಅದೇ ಪಾಟೀ ಸವಾಲನ್ನು ಅನ್ವಯಿಸಿಕೊಳ್ಳುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

Sd/-

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**